ನೆಂದರೆ ಆಲಮಟ್ಟಿಯಲ್ಲಿ ಆದಕ್ಕೆ ಬೇಕಾಗುತಕ್ಕಂಥ ರಾ– ಮೇಟಿರಿಯಲ್ಸ್ ಸಿಕ್ಕುತ್ತದೆ ಎಂದು ಹೇಳಿ ಅಲ್ಲಿ ಫ್ಯಾಕ್ಟರಿಯನ್ನು ಹಾಕಿದ್ದಾರೆ. ನನಗೆ ಗೊತ್ತಿರುವಮಟ್ಟಿಗೆ ರಾ– ಮೇಟೀರಿಯಲ್ಸ್ ಸಿಕ್ಕುತ್ತಿರುವುದು ತಾಳಿಕೋಟೆಯಲ್ಲಿ. ಆ ಸಿಮೆಂಟ್ ಫ್ಯಾಕ್ಟರಿಯನ್ನು ಆಲಮಟ್ಟಿಯಲ್ಲಿ ಹಾಕುವುದಕ್ಕೆ ಇರತಕ್ಕಂಥ ಪ್ರಭಲವಾದ ಕಾರಣಗಳೇನು ?

ಶ್ರೀ ಆರ್. ಗುಂಡೂರಾವ್.—ಈ ವಿಚಾರದಲ್ಲಿ ಶ್ರೀ ಬಸವರಾಜಪ್ಪ ಕಂಪನಿಯವರು ಲೈಸೆನ್ಸ್ ಬೇಕು ಎಂದು ಕೇಳಿದರು, ಸರ್ಕಾರ ಅವರಿಗೆ ಲೈಸೆನ್ಸ್ ಕೊಟ್ಟು, ಆದಷ್ಟು ಬೇಗ ಆ ಕಾರ್ಖಾನೆಯನ್ನು ಅಲ್ಲಿ ಸ್ಥಾಪನೆ ಮಾಡಬೇಕೆಂದು ಹೇಳಿದೆ. ಅವರು ನಾನಾ ಕಾರಣಗಳಿಂದ ಅದನ್ನು ಪ್ರಾರಂಭ ಮಾಡಲಿಲ್ಲ. ನಾವು ಆ ಲೈಸೆನ್ಸ್‌ನ್ನು ರಿನ್ಯೂ ಮಾಡಿದೆವು. ಆದರೂ ಅವರು ಆದನ್ನು ಪ್ರಾರಂಭ ಮಾಡಲಿಲ್ಲ. ಇದಕ್ಕೆ ಬೇಕಾಗತಕ್ಕಂಥ ಹಣಕಾಸಿನ ಶೇಖರಣೆ ಮತ್ತು ಇತರ ಸಲಕರಣೆಗಳ ಶೇಖರಣೆಯನ್ನು ಅವರು ಮಾಡಿದಹಾಗೆ ಕಾಣಲಿಲ್ಲ. ಆದ್ದರಿಂದ ಈ ಕೆಲಸ ನಿಧನವಾಗಿದೆ. ಇದರ ಬಗ್ಗೆ ನಾವು ಪುನರಾಲೋಚನೆ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಕೇಂದ್ರ ಸರ್ಕಾರದವರ ಅಭಿಪ್ರಾಯಕ್ಕನುಸಾರವಾಗಿ ಈ ಸಿಮೆಂಟ್ ಬಹಳ ಮಹತ್ವದ ವಸ್ತುವಾಗಿರುವುದರಿಂದ ಎಲ್ಲೆಲ್ಲಿ ಇದಕ್ಕೆ ಅನುಕೂಲಗಳಿದೆಯೋ ಅಲ್ಲಿ ಮಿನಿ ಪ್ಲಾಂಟ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ತಯಾರು ಇದೆ. ಆಲಮಟ್ಟಿಯಲ್ಲಿ ಸಿಮೆಂಟ್ ಫ್ಯಾಕ್ಟರಿಯನ್ನು ಪ್ರಾರಂಭ ಮಾಡಲು ಇದನ್ನು ಪ್ರೈವೇಟ್ ಸಂಸ್ಥೆಯವರಿಗೆ ಕೈಯಲ್ಲಿ ಕೊಟ್ಟು ೧೦ ವರ್ಷ ವಾಯಿತು. ಅವರು ೧೦–೧೨ ವರ್ಷಗಳಿಂದ ಅವರು ಹೀಗೇಯೇ ನಿಧಾನ ಮಾಡುತ್ತಿದ್ದಾರೆ, ಅವರಿಗೆ ಕೊಟ್ಟಿರತಕ್ಕಂಥ ಲೈಸೆನ್ಸನ್ನು ಕ್ಯಾನ್ಸಲ್ ಮಾಡಿ ಸರ್ಕಾರದವರು ತಾಳಿಕೋಟೆಯಲ್ಲಿ ಒಂದು ಮಿನಿ ಪ್ಲಾಂಟನ್ನು ಪ್ರಾರಂಭ ಮಾಡುವುದು ಒಳ್ಳೆಯದು. ಈ ಬಗ್ಗೆ ತಾವು ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಆದನ್ನು ಬೇರೆಯವರಿಗೆ ಎಕ್ಸ್‌ಟೆನ್‌ಷನ್ ಮಾಡುವುದಕ್ಕೆ ಕೊಡಬಾರದು ಎಂದು ಈಗಾಗಲೇ ಸರ್ಕಾರ ಅವರಿಗೆ ಕಾಗದ ಬರೆದಿದೆ, ಇಂಡಿಯನ್ ರಯನ್ ಕಾರ್ಪೊರೇಷನ್‌ನವರು ಇನ್ನೊಂದು ಪ್ಲಾಂಟನ್ನು ಗುಲ್ಬರ್ಗದ ಮಾಲ್‌ಕೇಡ್‌ನಲ್ಲಿ ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದಾರೆ, ಆದನ್ನು ಪ್ರಾರಂಭ ಮಾಡುವುದಕ್ಕೆ ಗೌರ್ನಮೆಂಟ್ ಆಫ್ ಇಂಡಿಯಾದವರು ಅನುಮತಿ ಕೊಟ್ಟಿದ್ದಾರೆ. ಆದಷ್ಟು ಬೇಗ ಅವರು ಅದನ್ನು ಪ್ರಾರಂಭ ಮಾಡುತ್ತಾರೆಂದು ಕಾಣುತ್ತದೆ.

ಶ್ರೀ ಎಸ್. ಎಸ್. ಅರಕೇರಿ,—ಸ್ವಾಮಿ, ಗುಲ್ಬರ್ಗಾದ ಮಾಲ್‌ಕೇಡ್‌ನಲ್ಲಿ ಸ್ಥಾಪನೆ ಮಾಡುವುದು ಆಯಿತು. ಅದು ಇರಲಿ. ನಮ್ಮ ಬಿಜಾಪುರ ಜಿಲ್ಲೆ ಬರಗಾಲಕ್ಕೆ ಹೆಸರುವಾಸಿಯಾಗಿದೆ, ನಮ್ಮ ಬಿಜಾಪುರ ಜಿಲ್ಲೆಯ ತಾಳಿಕೋಟೆಯಲ್ಲಿ ಸಿಮೆಂಟ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡತಕ್ಕಂಥ ವಿಚಾರ ಏನು ಹಿಂದಿನಿಂದಲೂ ಇದೆ ಅದನ್ನು ಸರ್ಕಾರವೇ ವಹಿಸಿಕೊಂಡು ಈ ಬಗ್ಗೆ ಪೆತಕ್ಕೆ ಪ್ರಯತ್ನ ಮಾಡಬಾರದು ? ಇದಕ್ಕೆ ಟಾಪ್ ಪ್ರಯಾರಿಟಿಯನ್ನು ಕೊಡಬೇಕು ಎಂದು ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಆ ಪ್ಲಾಂಟನ್ನು ಸರ್ಕಾರವೇ ವಹಿಸಿಕೊಂಡು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡೋಣ,

Enrolment of educated persons in Employment Exchange of S. K. District.

(215) SRI B. A. MOHIDEEN (Bantwal)—Will the Minister for Labour be pleased to state:—

(a) the No. of educated persons registered their names in the Employment Exchanges in Sought Kanara district;

(b) whether the department has conducted any survey in respect of unemployed persons who have not registered their names;

(c) the No. of persons who have been provided employment opportunities through the Employment Exchange during this year in South Kanara district ?

SRI A. B. JAKANUR—Minister for Labour

(a) 16, 742 (as on 31-12-1980).

(b) No

(c) 1,193 (during 1980).

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ದಾಖಲಾತಿ ಮಾಡಿದ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ೧೬೭೪೨ ಎಂದು ಹೇಳಿದ್ದೀರಿ. ಇದರಲ್ಲಿ ಗ್ರಾಜ್ಯುಯೇಟ್ಸ್ ಎಷ್ಟು ? ನಾನ್‌ಗ್ರಾಜ್ಯುಯೇಟ್ಸ್ ಎಷ್ಟು ಅಂತ ಹೇಳುತ್ತೀರಾ ?

ಶ್ರೀ ಎ. ಬಿ.ಜಕನೂರ್.—ಆರ್ಟ್ಸ್ ಗ್ರಾಜ್ಯುಯೇಟ್ಸ್ ೯೪೮, ಸೈನ್ಸ್ ಗ್ರಾಜ್ಯುಯೇಟ್ಸ್ ೪೨೮, ಕಾಮರ್ಸ್ ಗ್ರಾಜ್ಯುಯೇಟ್ಸ್ ೧೦೪೧ ಉಳಿದವರೆಲ್ಲಾ ವಿ. ಟಿ. ಐ, ಡಿಪ್ಲೊಮೋ ಹೋಲ್ಡರ್ಸ್ ಇದ್ದಾರೆ.

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ಒಟ್ಟು ೧೬ ಸಾವಿರ ಚಿಲ್ಲರೆ ವಿದ್ಯಾವಂತರಲ್ಲಿ ಗ್ರಾಜ್ಯುಯೇಟ್ಸ್, ನಾನ್ ಗ್ರಾಜ್ಯುಯೇಟ್ಸ್ ಮತ್ತು ಡಿಪ್ಲೊಮೋ ಹೋಲ್ಡರ್ಸ್ ಎಷ್ಟು, ಜನ ಇದ್ದಾರೆ ಎಂದು ಹೇಳಿದೀರಿ. ನನ್ನ ಎರಡನೆಯ ಪ್ರಶ್ನೆಗೆ ಉತ್ತರವಾಗಿ ತಾವು ಈ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೧೯೩ ಜನಕ್ಕೆ ಉದ್ಯೋಗ ಕಲ್ಪಿಸಲಾಗಿದೆ ಎಂದು ಹೇಳಿದ್ದೀರಿ. ನಿರುದ್ಯೋಗಿ ವಿದ್ಯಾವಂತರಿಗೆ ಕೆಲಸ ಕೊಡುವುದು ಸರ್ಕಾರದ ಪಾಲಿಸಿಯಾಗಿದೆ. ಈ ನಿರುದ್ಯೋಗಿಗಳಿಗೆ ಕೆಲಸವನ್ನು ಕೊಡುತ್ತೇವೆಂದು ತಾವು ಚುನಾವಣಾ ಭಾಷಣಗಳಲ್ಲಿ ಹೇಳಿದ್ದೀರಿ. ಆದ್ದರಿಂದ ಒಂದು ವರ್ಷಕ್ಕೆ ಒಂದೊಂದು ಜಿಲ್ಲೆಗೆ ೧೬೯೬ ಜನಕ್ಕೆ ಈ ರೀತಿ ಉದ್ಯೋಗಗಳನ್ನು ಕೊಡುತ್ತಾ ಹೋದರೆ ಈ ನಿರುದ್ಯೋಗ ಸಮಸ್ಯೆಯನ್ನು ಯಾವಾಗ ಪೂರ್ಣವಾಗಿ ಪರಿಹಾರ ಮಾಡುತ್ತೀರಿ ? ಈ ನಿಮ್ಮ ಪಾಲಿಸಿ ಏನಿದೆ ಇದು ಸರಿಯೇ ಎಂಬುದನ್ನು ತಾವು ದಯವಾಡಿ ಹೇಳಬೇಕು.

ಶ್ರೀ ಎ. ಬಿ. ಜಕನೂರ್.—ಈ ಆರ್ಟ್ಸ್, ಸೈನ್ಸ್, ಕಾಮರ್ಸ್ ವಿಷಯಗಳಲ್ಲಿ ಟೋಟಲ್ ಫಿಗರ್ಸ್, ಈ ರೀತಿ ಇದೆ — ೧೫೧೭, ೬೭೯, ೧೪೬೧ ಇದರಲ್ಲಿ ಮೆನ್ ಆಂಡ್ ವಿಮೆನ್ — ಎಲ್ಲರೂ ಸೇರಿದ್ದಾರೆ.

ಶ್ರೀ ಬಿ. ಎ. ಮೊಹಿದ್ದೀನ್.—ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ಮಾಡಿರತಕ್ಕಂಥ ಒಟ್ಟು ೧೬ ಸಾವಿರ ಚಿಲ್ಲರೆ ಜನರಲ್ಲಿ ಸುಮಾರು ೧೬೦೦ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೀರಿ. What is the percentage of people who have been employed through this exchange ?

SRI A. B. JAKANUR.—As I said earlier, arts-948, Science-428, Commerce-1081, They are men. The total figures are Arts-1517 Science-679, Commerce-1461. ೧೯೮೦ ನೇ ಇಸವಿಯಲ್ಲಿ ೧೧೯೩ ಜನರಿಗೆ ಉದ್ಯೋಗವನ್ನು ಕೊಟ್ಟಿದ್ದೇವೆ. ತಮಗೆ ಗೊತ್ತಿರುವ ಹಾಗೆ ಎಲ್ಲರಿಗೂ ಎಂಪ್ಲಾಯ್‌ಮೆಂಟ್ಸ್ ಎಕ್ಸ್‌ಚೇಂಜ್ ಮೂಲಕ ಉದ್ಯೋಗಾವಕಾಶ ಕೊಡಿಸುವುದಕ್ಕೆ ಆಗುತ್ತಿಲ್ಲ. ಯಾರಿಗೆ ಉದ್ಯೋಗ ಬೇಕು ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಹೆಸರನ್ನು ನೋಂದಾಯಿಸಬೇಕು. ಅವರು ಈ ಬಗ್ಗೆ ಒಂದು ಲಿಸ್ಟನ್ನು ಪ್ರಿಪೇರ್ ಮಾಡುತ್ತಾರೆ, ಆ ಲಿಸ್ಟ್ ಪ್ರಕಾರ ಅವರು ಕೆಲಸ ಕಾಲಿ ಆದಹಾಗೆಲ್ಲಾ ಅದಕ್ಕೆ ಜನರನ್ನು ಕಳಿಸುತ್ತಾರೆ ಎಲ್ಲರಿಗೂ ಉದ್ಯೋಗವನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಯಾರಿಗೆ ಉದ್ಯೋಗ ಇಲ್ಲ ಅವರಿಗೆ ಕೆಲಸಕೊಡುತ್ತೇವೆ.

ಶ್ರೀ ಬಿ. ಎ. ಮೊಹಿದ್ದೀನ್.—ಸ್ವಾಮಿ, ಇನ್ನೊಂದು ಪ್ರಶ್ನೆಯನ್ನು ಇಲ್ಲಿ ಕೇಳಿದ್ದೇನೆ. ಇದಕ್ಕೆ ಇಲ್ಲ ಎಂದು ಹೇಳಿದ್ದೀರಿ. ನಿರುದ್ಯೋಗಿಗಳು ಯಾರಿದ್ದಾರೆ ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್

ನಲ್ಲಿ ಕ್ಯೂನಲ್ಲಿ ನಿಂತುಕೊಂಡು ತಮ್ಮ ಹೆಸರನ್ನು ನೋಂದಾಯಿಸುತ್ತಾರೆ. ಆದರೆ ದಾಖಲೆ ಮಾಡದೇ ಇರತಕ್ಕಂಥ ನಿರುದ್ಯೋಗಿಗಳು ಎಲೆಲ್ಲಿ ಎಷ್ಟೇಷ್ಟು ಜನ ಇದ್ದಾರೆ, ಅವರಲ್ಲಿ ನಿರುದ್ಯೋಗಿ ಕುಶಲಕರ್ಮಿಗಳು ಎಷ್ಟು, ಡಿಪ್ಲೊಮೋ ಹೋಲ್ಡರ್ಸ್ ಎಷ್ಟು, ಗ್ರಾಜ್ಯುಯೇಟ್ಸ್ ಎಷ್ಟು. ನಾನ್ ಗ್ರಾಜ್ಯುಯೇಟ್ಸ್ ಎಷ್ಟು ಎಂಬ ಬಗ್ಗೆ ಡಿಪಾರ್ಟ್‌ಮೆಂಟ್‌ನವರು ಏತಕ್ಕೆ ಒಂದು ಸಮೀಕ್ಷೆಯನ್ನು ನಡೆಸಬಾರದು ?

ಶ್ರೀ ಎ. ಬಿ. ಜಕನೂರ್.—ಆ ಪ್ರಕಾರ ರಾಜ್ಯಾದಂತ ಈ ಬಗ್ಗೆ ಸಮೀಕ್ಷೆ ನಡೆಸಲು ಶಕ್ಯವಲ್ಲ. ನಿರುದ್ಯೋಗಿಗಳು ಎಷ್ಟೋ ಜನ ಇರಬಹುದು. ಅವರಲ್ಲಿ ಯಾರಿಗೆ ಉದ್ಯೋಗಾವಕಾಶ ಬೇಕು ಎಂಬುದನ್ನು ಹೇಗೆ ಹೇಳುವುದಕ್ಕಾಗುತ್ತದೆ ? ಅವರು ಎಲ್ಲೆಲ್ಲಿ ಇರುತ್ತಾರೋ ಗೊತ್ತಿಲ್ಲ. ಎಲ್ಲರನ್ನೂ ಹುಡುಕಿಕೊಂಡು ಹೋಗಿ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

Bifurcation of Holenarasipur Taluk Panchayats

234 SRI H. D. DEVE GOWDA (Holenarasipur)—Will the Minister for Rural Development and Panchayat Raj be pleased to state:—

(a) whether the Government has received representations for the bifurcation of Doddakadanur Panchayat, Theranya Panchayat and Doddakunte Panchayat in Holenarasipur taluk;

(b) if so, whether any steps have been taken for bifurcation ?

SRI B. Ramaiah—Minister for Rural Development and Panchayat Raj

(a) Yes.

(b) It is not possible to bifurcate the same till the completion of Census operation of India.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ತಾವು ಉತ್ತರದಲ್ಲಿ ಭಾರತ ಜನಗಣತಿ ಅವಧಿ ಮುಗಿಯುವವರೆಗೆ ವಿಭಜನೆ ಮಾಡಲು ಅವಕಾಶವಿರುವುದಿಲ್ಲ ಎಂದು ಹೇಳಿದ್ದೀರಿ. ಇದು ಮುಗಿಯುವುದು ಯಾವಾಗ ? ಈ ಸೆನ್ಸಸ್ ವರ್ಕ್ ಮುಗಿದು ಹೋದಮೇಲೆ ಈ ೩ ಪಂಚಾಯತಿಗಳನ್ನು ಆಡಳಿತ ದೃಷ್ಟಿಯಿಂದ ಬೈಫರ್‌ಕೇಟ್ ಮಾಡತಕ್ಕಂಥ ನಿರ್ಣಯವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಮಯ್ಯ.—ಸ್ವಾಮಿ, ಈಗಾಗಲೇ ನಮಗೆ ನಮಗೆ ರೆವೆನ್ಯೂ ಇಲಾಖೆಯಿಂದ ಆದೇಶ ಬಂದಿದೆ. ಈ ಜನಗಣತಿ ಸಂಪೂರ್ಣವಾಗಿ ಮುಗಿಯುವವರೆಗೆ ಅಂದರೆ ಜೂನ್ ೧೯೮೧ ರ ವರೆಗೆ ನಾವು ಯಾವುದೆ ತರಹ ವಿಭಜನೆಗಳನ್ನು ಮಾಡುವಂಥಾದಕ್ಕೆ ಅವಕಾಶ ಇಲ್ಲ. ಅದು ಮುಗಿದ ನಂತರ ಶ್ರೀ ದೇವೇಗೌಡರು ಇಚ್ಛೆಪಡುವ ರೀತಿಯಲ್ಲಿ ಆ ೩ ಪಂಚಾಯತಿಗಳನ್ನು ವಿಭಜನೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದಕ್ಕೆ ಒಂದು ಪರಿಮಿತಿ ಇದೆ, ೧೫೦೦ ಜನಸಂಖ್ಯೆ ಇದ್ದರೆ ಅಂಥಾದ್ದು ಈ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರಬೇಕು ಎಂದು ಇದೆ; ಹಾಗೆ ಬಂದರೆ ಮಾತ್ರ ವಿಭಜನೆ ಮಾಡಬೇಕು. ಈ ವಿಚಾರದಲ್ಲಿ ಡಿವಿಷನಲ್ ಕಮೀಷನರ್ ಮುಖಾಂತರ ಈ ಕೆಲಸವನ್ನು ನಾವು ಮಾಡಿಸುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಮೂರು ಗ್ರೂಪ್ ಪಂಚಾಯ್ತಿಗಳ population is more than 5000 ಎಂದು ತಮಗೆ ವರದಿ ಬಂದಿರಬಹುದು. ಈಗ ಹಾಲಿ ಇರತಕ್ಕಂಥ ಜನ ಸಂಖ್ಯೆ ಐದು ಸಾವಿರ, ಆರು ಸಾವಿರ, ಏಳು ಸಾವಿರ, ಎಂಟು ಸಾವಿರ, ಹೀಗೆ ಹತ್ತು ಸಾವಿರದವರೆವಿಗೂ ಇದೆ. ಆದ್ದರಿಂದ ಆಡಳಿತ ದೃಷ್ಟಿಯಿಂದ ಈ ಪಂಚಾಯ್ತಿಗಳನ್ನು ವಿಭಜಿಸಬೇಕೆಂದು ಪಲವಾರು ಮನವಿಗಳನ್ನು ಸ್ಥಳೀಯರು ಕೊಟ್ಟಿದ್ದಾರೆ. ಜನತೆಯ ಕೊಟ್ಟಿದ್ದಾರೆ. ರಾಜಕಾರಣಕ್ಕೋಸ್ಕರ ನಾವು ಅಧಿಕಾರದಲ್ಲಿ ಉಳಿಯುತ್ತೇವೆ ಎನ್ನುವ ಸರ್ಕಾರದ ಮನೋಭಾವನೆ ಏನಿದೆ ಅದು ಸರಿಯಲ್ಲ.